ಅಂದು ಹೊರ ಬಾಗಿಲನ್ನು ಅಷ್ಟಗಲ ತೆರೆದುಕೊಂಡು ಒಳಗೆಲ್ಲೊ ಅನ್ಯಮನಸ್ಕಳಾಗಿ ಎತ್ತಲೋ ನೋಡುತ್ತಾ ಒಬ್ಬಳೇ ಕುಳಿತಿದ್ದ ಆಯವ್ವ ನನಗಂತೂ ಒಂಚೂರೂ ಹಿಡಿಸಿರಲಿಲ್ಲ. ಒಳಗಿನಿಂದ ಅಳು ಒತ್ತರಿಸಿಕೊಂಡು ಬಂದಿತ್ತು. ಅದೇ ಅವಳ ನಿಜವಾದ ಹೆಸರೋ ಅಥವಾ ಬೇರೆ ಯಾವುದಾದರೂ ಹೆಸರಿದ್ದು ಮನೆಯವರು ಕರೆಯುತ್ತಿದ್ದ ಅಡ್ಡ ಹೆಸರು ಅದಾಗಿತ್ತೋ ಗೊತ್ತಿಲ್ಲ. ಸುಮಾರು ನಲವತ್ತು ನಲವತ್ತೈದರ ಹೆಣ್ಣು. ದಪ್ಪವೂ ಅಲ್ಲದ, ತೆಳುವೂ ಅಲ್ಲದ ನೀಳಕಾಯೆ. ಉತ್ತರ ಭಾರತೀಯರಂತೆ ತಲೆ ಮೇಲೆ ಸೆರಗು ಹೊದ್ದು ಸೆರಗಿನ ತುದಿಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಿದ್ದಳು. ಉಟ್ಟ ಕೆಂಪು ಬಣ್ಣದ ಮಾಸಲು ಸೀರೆಯಂತೂ ಇನ್ನಿಲ್ಲದಷ್ಟು ಹಪ್ಪಟೆಯಾಗಿತ್ತು. ಸುಂದರಿಯರ ಸಾಲಿಗೂ ಸೇರದ, ತೀರಾ ಕಳಪೆಯೂ ಅನ್ನಲಾಗದ ಸಾಧಾರಣ ರೂಪ. ಅಥವಾ ಒಂದಾನೊಂದು ಕಾಲದಲ್ಲಿ ಚಂದವಿದ್ದು ಹಳೆ ಸೀರೆಯಲ್ಲಿ ಹಾಗೆ ಕಾಣಿಸುತ್ತಿದ್ದಳೋ ಗೊತ್ತಿಲ್ಲ.

ಅಪ್ಪ ನನ್ನನ್ನು ಕರೆದುಕೊಂಡು ಬರುವ ವಿಷಯ ಅವಳಿಗೂ ಗೊತ್ತಿತ್ತು. ಆ ವಿಷಯ ಕುರಿತು ಅಪ್ಪ ಮತ್ತು ಆಯವ್ವರ ನಡುವೆ ಸುಮಾರು ಪತ್ರ ವ್ಯವಹಾರಗಳು ನಡೆದಿದ್ದವು. ಅಷ್ಟಾಗಿ ಓದು ಬರಹ ಗೊತ್ತಿಲ್ಲದ ಆಯವ್ವ ಖುದ್ದಾಗಿ ಪತ್ರ ಬರೆದಿದ್ದಳಾ, ಅಮ್ಮನಿಗೂ ಅನುಮಾನ ಬಂದಂತಿರಲಿಲ್ಲ. ಬಹುಶಃ ಆಗೆಲ್ಲಾ ಯಾರಾದರೂ ಪತ್ರ ಬರೆದುಕೊಡುವವರು ಇರುತ್ತಿದ್ದುದರಿಂದ ಆಯವ್ವ ಕೂಡಾ ಯಾರಿಂದಲಾದರೂ ಬರೆಸಿ ಪತ್ರ ಕಳುಹಿಸಿರಬೇಕೆಂದು ಅಮ್ಮ ಅಂದುಕೊಂಡಿದ್ದಳೆನ್ನಿಸುತ್ತೆ.

ಅಪ್ಪ ಒಂದೆರಡು ದಿನಗಳಿದ್ದು ಕಾಲೇಜು, ದಿನಾ ನಾನು ಓಡಿಯಾಡಬೇಕಿದ್ದ ರಸ್ತೆ ಪರಿಚಯ ಮಾಡಿಕೊಟ್ಟು ತಮ್ಮ ಕೆಲಸವಾಗುತ್ತಿದ್ದಂತೆ, ‘ಆಯವ್ವ ಹೇಳಿದಂಗೆ ಕೇಳ್ಕೊಂಡ್ ಇರು. ಆಗಾಗ ಬಂದು ನೋಡ್ಕಂಡ್ ಹೋಗ್ತೀನಿ.’ ಎಂದವರೇ ಬಂದ ಹಾಗೆ ಹೊರಟು ಹೋಗಿದ್ದರು.

ಎಲ್ಲವೂ ಹೊಸತು, ಪೂರಂಪೂರ. ಆಯವ್ವ ಮಾತ್ರವಲ್ಲ. ಮನೆ, ಊರು, ಕಾಲೇಜು, ರಸ್ತೆ, ಹೊಸ ವಿದ್ಯಾರ್ಥಿಗಳು, ಅಲ್ಲಿನ ಪರಿಸರ, ಪ್ರತಿಯೊಂದೂ. ಕಾಲೇಜೇನೊ ಮನೆ ಹತ್ತಿರವೇ ಇತ್ತು. ನಡೆದೇ ಹೋಗಬಹುದಿತ್ತು. ಬಹುಶಃ ಆ ಕಾರಣಕ್ಕೆ ಅಪ್ಪ ನನ್ನನ್ನು ತಂದು ಇಲ್ಲಿ ಬಿಟ್ಟಿದ್ದರೋ ಏನೋ.

ಮನೆಯಂದರೆ ನಾನು ಊಹಿಸಿಕೊಳ್ಳಲೂ ಸಾಧ್ಯವಿರಲಿಲ್ಲ, ಅಷ್ಟು ದೊಡ್ಡದಿತ್ತು. ಭಯಂಕರ ಕತ್ತಲು ಬೇರೆ. ಮೇಲುಕೋಟೆಯಂತಹ ಸಣ್ಣ ಊರಿನ ಚಿಕ್ಕ ಮನೆಯಿಂದ ಬಂದಿದ್ದ ನನಗೆ ಮೊದ ಮೊದಲು ಮನೆಯೊಳಗಡೆಯೇ ಗವ್ವೆನ್ನುತ್ತಿದ್ದ ಆ ಅಸಾಧ್ಯ ಕತ್ತಲಿಗೆ ಹೊಂದಿಕೊಳ್ಳುವುದು ಸಾಧ್ಯವೇ ಇಲ್ಲವೆನ್ನಿಸಿ ಭಯದಿಂದ ತತ್ತರಿಸುತ್ತಿದ್ದೆ. ಹಗಲು ಹೊತ್ತೂ ಸರಿಯಾಗಿ ಏನೂ ಕಾಣದ ಹೆಪ್ಪುಗಟ್ಟಿದಂತಿದ್ದ ಕತ್ತಲಿನಲ್ಲಿ ಒಳ ಪ್ರವೇಶಿಸಿದ ಹಾಗೂ ಪ್ರವೇಶಿಸಿಕೊಳ್ಳುತ್ತಲೇ ಹೋಗುವ ಕೋಣೆಗಳೊಳಗೊಂದು ಕೋಣೆ, ನಡುಕೋಣೆ, ಒಳಕೋಣೆ, ಮೂಲೆಕೋಣೆಗಳೆಂದು ತೆರೆದುಕೊಳ್ಳುತ್ತಲೇ ಹೋಗುವ ಕೋಣೆಗಳು. ಒಳ ಒಳ ಹೋದ ಹಾಗೂ ಪ್ರತಿ ಕೋಣೆಯ ಮೂಲೆ, ಮೂಲೆಗಳಲ್ಲೂ ಗಂಟು ಕಟ್ಟಿ ಪೇರಿಸಿಟ್ಟ ಏನೇನೋ ಸಾಮಾನು ಸರಂಜಾಮುಗಳ ಬೃಹತ್ ಮೂಟೆಗಳು. ಅಷ್ಟೇನೂ ಸ್ವಚ್ಛಗೊಳಿಸದ ಮನೆಯಲ್ಲಿ ನಡೆದಾಡುವಾಗೆಲ್ಲಾ ದೂಳು ಏಳುತ್ತಿದೆಯೇನೊ ಎಂಬ ಭ್ರಮೆ ಹುಟ್ಟಿಸುವಂತೆ ಕೋಣೆಗಳಲ್ಲಿ ಸದಾ ತುಂಬಿರುತ್ತಿದ್ದ ದಟ್ಟೈಯಿಸಿದಂತಹ ದೂಳಿನ ಹೊಗೆ ಮತ್ತು ಶತಮಾನಗಳಿಂದ ಆ ಮನೆಗೆ ಅಂಟಿಕೊಂಡಿದೆಯೇನೊ ಅನ್ನಿಸುವಂತೆ ಭಾಸವಾಗುತ್ತಿದ್ದ ಗಾಢವಾದ ಯಾವುದೋ ಪುರಾತನ ಕಮಟು ವಾಸನೆ. ಮಹಡಿ ಮೇಲೆ ಉಪಯೋಗಿಸದೆ ಬಿಟ್ಟಿದ್ದ ಅದೆಷ್ಟೋ ಕೋಣೆಗಳಲ್ಲಿ, ಒಂದು ಪುಟ್ಟ ಕೋಣೆಯನ್ನು ಆಯವ್ವನೇ ನಂಗೆ ಬಿಟ್ಟುಕೊಟ್ಟಳೋ ಇಲ್ಲಾ ನಾನೇ ಆರಿಸಿಕೊಂಡೆನೋ ಈಗ ನೆನಪಿಲ್ಲ.

ದಿನ ಕಳೆದ ಹಾಗೆ ಆಯವ್ವ ಹತ್ತಿರವಾದಳೆನ್ನುವುದಕ್ಕಿಂತಾ ಒಗ್ಗಿಕೊಳ್ಳುವುದು ನಂಗೆ ಅನಿವಾರ್ಯವಾಗಿ ಹೋಯಿತೆಂದರೂ ಸರಿ. ದಿನದ ಮುಕ್ಕಾಲು ಹೊತ್ತು ಹೇಗೋ ಕಾಲೇಜಿನಲ್ಲಿ ಕಳೆದುಹೋಗುತ್ತಿತ್ತು. ಆಯವ್ವ ನನಗಾಗಿ ವಿಶೇಷವಾಗಿ ಏನೂ ಮಾಡುತ್ತಿದ್ದದ್ದು ನೆನಪಿಲ್ಲ. ಸಾಮಾನ್ಯವಾಗಿ ಬೆಳಿಗ್ಗೆ ಒಂದು ದೊಡ್ಡ ಡಬರಿಯಲ್ಲಿ ರಾಗಿ ಮಣ್ಣಿ ಕಾಯಿಸಿಟ್ಟಿರುತ್ತಿದ್ದಳು. ಇರುವ ಇಬ್ಬರಿಗೆ ಅಷ್ಟೊಂದು ರಾಗಿ ಮಣ್ಣಿ ಯಾಕೆ ಕಾಯಿಸುತ್ತಿದ್ದಳೆಂದು ಅಚ್ಚರಿಯಾಗುತ್ತಿತ್ತು. ಎದ್ದ ಕೂಡಲೇ ಅದನ್ನೇ